ಕೇಳಿದ್ದಳು. ಆದರೆ ಅವಳು ಸ್ವಾಮೀಜಿಯವರನ್ನು ನೋಡಿರಲೇ ಇಲ್ಲ. ಆಕೆಗೆ ೨೮ ವರ್ಷ ವಯಸ್ಸಾಗಿದ್ದಾಗಲೇ ಅವರನ್ನು ಆಕೆ ಮೊದಲು ಬಾರಿ ನೋಡಿದ್ದಳು. ಆಗಲೇ ಅವರ ಬಗ್ಗೆ ಅವಳಲ್ಲಿ ಅಪಾರ ಗೌರವ ಮೂಡಿತು. ಮುಂದೆ ಸ್ವಾಮಿ ದಯಾನಂದರು ಬಗ್ಗೆ ಕಲ್ಯಾಣಿ ಹೀಗೆ ಬರೆಯುತ್ತಾಳೆ: ''ಆಗ ನಮ್ಮ ಕುಟುಂಬದಲ್ಲಿ ನಡೆಯುತ್ತಿದ್ದ ಚರ್ಚೆಗಳಲ್ಲಿ, ಮುಂದೆ ನನ್ನ ಜೀವನವು ದಯಾನಂದಜಿಯವರ ಸಂಸ್ಥೆಯಲ್ಲಿ ಸ್ಪಷ್ಟವಾದ ರೂಪವನ್ನು ಪಡೆಯುವುದೆಂಬ ಬಗ್ಗೆ ಯಾವ ಸೂಚನೆಯೂ ಇರುತ್ತಿರಲಿಲ್ಲ.''

ಕಲ್ಯಾಣಿಯ ಅಜ್ಜ, ತಾಯಿ ಹಾಗೂ ಕುಟುಂಬದ ಇತರರೆಲ್ಲ ಶ್ರೀರಾಮಕೃಷ್ಣರ ನೇರ ಶಿಷ್ಯಂದಿರ ಶಿಷ್ಯರಾಗಿದ್ದುದರಿಂದ, ಕಲ್ಯಾಣಿಗೂ ದಿವ್ಯತ್ರಯರ ಮೇಲೆ ಭಕ್ತಿ ಅಂಕುರವಾಯಿತು. ಅದೇ ರೀತಿ ರಾಮಕೃಷ್ಣ ಮಿಷನ್ ಮೇಲೆ ಕೂಡ ಅಪಾರ ಗೌರವ ಹುಟ್ಟಿತು. ಅವಳಿಗೆ ಇಂಗ್ಲಿಷ್ ಸಾಹಿತ್ಯ ಹಾಗೂ ಆಧ್ಯಾತ್ಮಿಕ ಜೀವನವನ್ನು ಕುರಿತ ಗ್ರಂಥಗಳನ್ನು ಓದುವುದರಲ್ಲಿ ವಿಶೇಷ ಆಸಕ್ತಿ . ಪಿ.ಜಿ. ವುಡ್‌ಹೌಸ್, ಮಾರ್ಕ್ ಟ್ವೇನ್, ಚಾರ್ಲ್ಸ್ ಡಿಕೆನ್ಸ್ ಅವಳಿಗೆ ಪ್ರಿಯವಾದ ಲೇಖಕರು. ಪ್ರಸಿದ್ಧ ಇಂಜಿನಿಯರಿಂಗ್ ಪ್ರೊಫೆಸರ್ ಆಗಿದ್ದ ಪ್ರೊಫೆಸರ್ ಮುಡಿಯಿಲ್ ಕೇರಳ ವರ್ಮ ಗೋವಿಂದ ಪಿಳ್ಳೈ (ಕಲ್ಯಾಣಿಯ ತಂದೆ) ಅವರು ತಮ್ಮ ಮಗಳು ಕಲ್ಯಾಣಿಯ ತಮ್ಮ ಬಂಧುಗಳಾಗಿದ್ದ ಡಾ. ರಾಮನ್ ತಂಬಿ ಹಾಗೂ ಡಾ.ಕೇಶವನ್ ನಾಯರ್ ಅವರ ಹಾದಿಯಲ್ಲೇ ಮುಂದುವರಿಯಬೇಕೆಂದು ಬಯಸಿದ್ದರು. ಆರಂಭದಲ್ಲಿ ಕಲ್ಯಾಣಿ ಅದಕ್ಕೆ ಸಮ್ಮತಿಸಿದ್ದಳು, ಹಾಗೂ ತಂದೆಯವರ ಆಸೆಯನ್ನು ಪೂರೈಸಲು ಬೆಂಗಳೂರಿನ ಪ್ರತಿಷ್ಠಿತ ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜನ್ನು ಸೇರಿದಳು. ಆದರೆ ಕಲ್ಯಾಣಿಗೆ ತನ್ನ ಎಳವೆಯಿಂದಲೇ ರೋಗ ಪೀಡಿತರ ಸೇವೆ ಮಾಡುವ ಹಾಗೂ ಅವರ ಆರೋಗ್ಯವನ್ನು ಉತ್ತಮಗೊಳಿಸುವ ಅಭಿಲಾಷೆ ಬಲವಾಗಿತ್ತು ಶ್ರೀಮಾತೆ ಶಾರದಾದೇವಿಯವರ ಸುದೀರ್ಘ ಸೇವಾನಿರತ ಹಾಗೂ ಪ್ರೇಮಮಯ ಜೀವನದಿಂದ ಆಕೆ ಅತ್ಯಂತ ಪ್ರಭಾವಿತಳಾಗಿದ್ದಳು. ಅವಳ ತಂಗಿ ಶ್ರೀಮತಿ ಉಷಾ ಮೆನನ್ ಹೇಳುವಂತೆ, ರೋಗಿಗಳಿಗೆ ಸೇವೆಮಾಡಬೇಕೆಂಬ ಕಲ್ಯಾಣಿಯ ತೀವ್ರ ಬಯಕೆ ಅವಳನ್ನು ವೈದ್ಯಕೀಯ ಶಿಕ್ಷಣ ನಿಲ್ಲಿಸುವಂತೆ, ಹಾಗೂ ದೆಹಲಿಯಲ್ಲಿರುವ ರಾಜಕುಮಾರಿ ಅಮೃತ್ ಕೌರ್ ಕಾಲೇಜ್ ಆಫ್ ನರ್ಸಿಂಗ್ ಸೇರುವಂತೆ ಒತ್ತಾಯಿಸಿತು. ವೈದ್ಯಕೀಯ ವೃತ್ತಿಗೆ ಹೋಲಿಸಿದರೆ ಕಡಿಮೆ ಆಕರ್ಷಕವಾದ ನರ್ಸಿಂಗ್ ಕೆಲಸವನ್ನು ತಮ್ಮ ಮಗಳು ಆರಿಸಿಕೊಂಡುದು ಅವಳ ತಂದೆಗೆ ಅಷ್ಟೊಂದು ಹಿಡಿಸಲಿಲ್ಲ. ಇದು ಅವರ ಆರೋಗ್ಯದ ಮೇಲೆ ಪರಿಣಾಮ ಬೀರಿತು; ಕ್ರಮೇಣ ಅವರು ಮೆದುಳಿನ ಆಘಾತಕ್ಕೆ ಒಳಗಾದರು.

ಕಲ್ಯಾಣಿ ತನ್ನ ನರ್ಸಿಂಗ್ ಅಧ್ಯಯನದ ಉದ್ದಕ್ಕೂ ಮೊದಲ ಸ್ಥಾನ ಪಡೆದಳು. ಅವಳು ತನ್ನ ಅದ್ಭುತ ಸಾಧನೆಗೆ ಭಾರತದ ಆಗಿನ ರಾಷ್ಟ್ರಪತಿಯಾಗಿದ್ದ ಡಾ. ಎಸ್. ರಾಧಾಕೃಷ್ಣನ್ ಅವರಿಂದ ಸುವರ್ಣ ಪದಕವನ್ನು ಪಡೆದಳು.

ನರ್ಸಿಂಗ್ ತರಬೇತಿಯನ್ನು ಪೂರ್ಣವಾಗಿ ಪಡೆದ ಕಲ್ಯಾಣಿ, ಬಳಿಕ ಐದು ಉತ್ತಮ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸಿ ಅಸಾಧಾರಣ ವೃತ್ತಿ ಅನುಭವವನ್ನು ಪಡೆದಳು. ನರ್ಸಿಂಗ್ ಕೆಲಸದಲ್ಲೂ ಅವಳು ಹೆಚ್ಚಿನ ಪರಿಣತಿಯನ್ನು ಪಡೆದಳು. ಅವಳು ಹೀಗೆ ಹೇಳುತ್ತಾಳೆ: ''ಕಠಿಣ ಪರಿಶ್ರಮದ ಫಲವಾಗಿ ನಾನು ಎಲ್ಲ ಆಸ್ಪತ್ರೆಗಳ ಆಡಳಿತಗಾರರಿಂದ ಹೆಚ್ಚಿನ ಗೌರವವನ್ನು ಪಡೆದೆ. ಅವರೂ ನನ್ನನ್ನು ತುಂಬ ಗೌರವದಿಂದ ಕಂಡರು.''

೧೯೬೨ರ ಸೆಪ್ಟೆಂಬರ್ ೧ರಂದು ಕಲ್ಯಾಣಿಯ ಕನಸು ನನಸಾಯಿತು. ಅವಳ ಬಾಲ್ಯಕಾಲದ ಆದರ್ಶ ವ್ಯಕ್ತಿಯಾಗಿದ್ದ ಸ್ವಾಮಿ ದಯಾನಂದರ ಜೊತೆಗೆ ಸೇವೆ ಸಲ್ಲಿಸುವ ಅವಕಾಶವು ಅವಳಿಗೆ ದೈವೇಚ್ಛೆಯಂತೆ ಲಭಿಸಿತು.

೧೯೬೨ರಿಂದ ೧೯೯೩ರ ವರೆಗೆ ಸ್ವಾಮಿ ದಯಾನಂದರ ಹಾಗೂ ಅವರ ನಂತರ ಸಂಸ್ಥೆಯ ಮುಖ್ಯಸ್ಥರಾದ ಸ್ವಾಮಿ ಗಹನಾನಂದರ (ಮುಂದೆ ಅವರು ರಾಮಕೃಷ್ಣ ಮಹಾಸಂಘದ ೧೪ನೇ ಪರಮಾಧ್ಯಕ್ಷರಾದರು) ಮಾರ್ಗದರ್ಶನದಲ್ಲಿ ಆಕೆ ಸಾವಿರಾರು ಮಂದಿ ರೋಗಿಗಳಿಗೆ ಸೇವೆ ಸಲ್ಲಿಸುತ್ತಾ ಅವಿಶ್ರಾಂತವಾಗಿ ದುಡಿದಳು.

ಆರಂಭದಲ್ಲಿ ಕಲ್ಯಾಣಿ ಸಿಸ್ಟರ್ ಆಗಿ ಹಾಗೂ ಅಸಿಸ್ಟಂಟ್ ಮ್ಯಾಟ್ರನ್ ಆಗಿ ಸೇವೆ ಸಲ್ಲಿಸಿದಳು; ನಂತರ ಸ್ಕೂಲ್ ಆಫ್ ನರ್ಸಿಂಗ್‌ನ ಪ್ರಿನ್ಸಿಪಾಲ್ ಆದಳು. ಸೇವಾ ಪ್ರತಿಷ್ಠಾನದ ನರ್ಸಿಂಗ್ ಎಕ್ಸಿಕ್ಯೂಟಿವ್ ಆಗಿ ಅವಳು ಸಲ್ಲಿಸಿದ ಸೇವೆ ಮುಂದಿನ ತಲೆಮಾರುಗಳಿಗೆ ಅನುಕರಣೀಯವಾಗಿದೆ.

ಕಲ್ಯಾಣಿ ತನ್ನ ವೃತ್ತಿ ಕೌಶಲ್ಯದಿಂದಲೂ, ಅಸಾಧಾರಣವಾದ ಪರಿಶುದ್ಧ ವ್ಯಕ್ತಿತ್ವದಿಂದಲೂ ಬೇಗನೆ ಸ್ವಾಮಿ ದಯಾನಂದರ ಹಾಗೂ ಸ್ವಾಮಿ ಗಹನಾನಂದರ ಸಂಪೂರ್ಣ ವಿಶ್ವಾಸಕ್ಕೆ ಪಾತ್ರಳಾದಳು. ಈ ಇಬ್ಬರು ಸಂನ್ಯಾಸಿಗಳೂ ಸಮರ್ಥರಾದ, ಅನುಕಂಪೆಯಿಂದ

**ಆಗಿನ ರಾಷ್ಟ್ರಪತಿ ಡಾ. ಎಸ್.ರಾಧಾಕೃಷ್ಣನ್ ಅವರಿಂದ ಸುವರ್ಣ ಪದಕವನ್ನು ಪಡೆಯುತ್ತಿರುವ ಸೋದರಿ ಕಲ್ಯಾಣಿ**



ಅವರು ಎಲ್ಲ ಮುಖ್ಯವಾದ ವಿಚಾರಗಳಿಗೆ ಸಂಬಂಧಿಸಿದಂತೆ ಸೋದರಿ ಕಲ್ಯಾಣಿಯ ಜೊತೆಗೆ ಚರ್ಚಿಸುತ್ತಿದ್ದರು. ಅವಳು ಸೇವಾ ಪ್ರತಿಷ್ಠಾನದೊಂದಿಗೆ ಸಂಪೂರ್ಣವಾಗಿ ತನ್ನನ್ನು ಗುರುತಿಸಿಕೊಂಡಿದ್ದಳು. ಅವಳು ಸೇವಾ ಪ್ರತಿಷ್ಠಾನದೊಂದಿಗೆ ಯಾವ ರೀತಿ ಒಂದಾಗಿದ್ದಳು ಎಂಬುದನ್ನು ನೇರ ನೋಡಿಯೇ ತಿಳಿದುಕೊಳ್ಳಬೇಕಿತ್ತು. ಸೇವಾ ಪ್ರತಿಷ್ಠಾನದಲ್ಲಿನ ಜೀವನವೆಲ್ಲ ಸವಾಲುಗಳಿಂದ ಕೂಡಿದ್ದಾಗಿತ್ತು. ಕೆಲವು ಮಂದಿ ನಿಯಮಗಳನ್ನು ಉಲ್ಲಂಘಿಸುವ ಸಿಬ್ಬಂದಿಗಳು ಆಡಳಿತಗಾರರಿಗೆ ಸಮಸ್ಯೆ ತಂದೊಡ್ಡುತ್ತಿದ್ದರು. ನೌಕರರ ಸಂಘದ ನಾಯಕರು ಕೆಲವೊಮ್ಮೆ ಆಗಿನ ಮುಖ್ಯಸ್ಥರಾಗಿದ್ದ ಸ್ವಾಮಿ ಗಹನಾನಂದರಿಗೆ ತೊಂದರೆ ಕೊಡುತ್ತಿದ್ದರು. ಕಲ್ಯಾಣಿಯ ತಂಗಿ ಶ್ರೀಮತಿ ಉಷಾ ಮೆನನ್ ಹೇಳುತ್ತಾಳೆ: ''ನನ್ನ ಅಕ್ಕ ಯಾವಾಗಲೂ ಅವರ ಬೆಂಬಲಕ್ಕೆ ಇರುತ್ತಿದ್ದರು. ಅವರು ಕೂಡ ಆಕೆಯನ್ನು ಆತ್ಮಜಾಗೃತಿ ಹೊಂದಿದ ವ್ಯಕ್ತಿಯೆಂದು ಪರಿಗಣಿಸುತ್ತಿದ್ದರು.''

ಒಂದು ಬಾರಿ ಸೋದರಿ ಕಲ್ಯಾಣಿ ಉಷಾಗೆ ಹೇಳಿದ್ದಳು: ''ಒಂದು ಸಲ ಅಂಥ ಮುಷ್ಕರ ನಡೆದಾಗ, ಒಬ್ಬ ವ್ಯಕ್ತಿ ಒಂದು ಚಾಕುವಿನೊಂದಿಗೆ ನನ್ನ ಆಫೀಸಿಗೆ ನುಗ್ಗಿಬಿಟ್ಟಿದ್ದ. ನನ್ನೊಳಗೆ ಅದಾವುದೋ ಒಂದು ಶಕ್ತಿ ಬಂದುಬಿಟ್ಟಿತ್ತು; ನಾನು ಒಬ್ಬಂಟಿಯಾಗಿಯೇ ಅವನನ್ನು ನಿರಾಯುಧನನ್ನಾಗಿ ಮಾಡಿಬಿಟ್ಟೆ. ನಿಜಕ್ಕೂ ಇದು ಶ್ರೀಮಾತೆ ಶಾರದಾ ದೇವಿಯವರ ಕೃಪೆ.''

ಉಷಾ ಹೇಳುತ್ತಾಳೆ: ''ಒಂದು ಸಲ ನನ್ನ ಅಕ್ಕ ನನಗೆ ಹೇಳಿದ್ದಳು, ಅವಳು ಶ್ರೀಮಾತೆಯವರೊಂದಿಗೆ ಅತ್ಯಂತ ನಿಕಟವಾದ, ಆತ್ಮೀಯವಾದ ಭಾವಸಮಾಧಿಯನ್ನು ಹೊಂದಿದ್ದಳು ಎಂದು: 'ಶ್ರೀಮಾತೆಯವರು ಸತತವೂ ನನ್ನನ್ನು ಕಾಪಾಡುತ್ತಿದ್ದಾರೆ.' ''

ಈಗಿನ ಪ್ರಭಾರ ನರ್ಸಿಂಗ್ ಸೂಪರಿಂಟೆಂಡೆಂಟ್ ಆಗಿರುವ ಶ್ರೀಮತಿ ನೂಪುರ್ ಕನಾ ದತ್ತ ಅವರು ಹೇಳುತ್ತಾರೆ:

''ಸೋದರಿ ಕಲ್ಯಾಣಿಯದು ಅತ್ಯಂತ ಪ್ರಭಾವಶಾಲಿ ವ್ಯಕ್ತಿತ್ವ. ಸೌಂದರ್ಯ, ಪಾವಿತ್ರ್ಯ, ಸರಳತೆ ಹಾಗೂ ಕರುಣೆ ಅವರಿಂದ ಹೊರಸೂಸುತ್ತಿದ್ದವು. ೧೯೭೬ರಲ್ಲಿ ನಾನು GNM (ಜನರಲ್ ನರ್ಸಿಂಗ್ ಆಂಡ್ ಮಿಡ್‌ವೈಫರಿ) ವಿದ್ಯಾರ್ಥಿನಿಯಾಗಿ ಸೇರಿದೆ. ನಾನು ಅವರ ಪ್ರೀತಿಯ ಆರೈಕೆಯಲ್ಲಿ ೧೬ ವರ್ಷವಿದ್ದೆ–೧೯೭೬ ರಿಂದ ೧೯೯೨ರ ತನಕ. ಅವರಿಂದ ನಾನು ಸಾಕಷ್ಟು ಕಲಿತೆ. ಎಲ್ಲ ಸಹಾಯ, ಮಾರ್ಗದರ್ಶನಗಳಿಗಾಗಿ ನಾನು ಅವರಿಗೆ ಕೃತಜ್ಞಳು. ನಮಗೆಲ್ಲ ಅವರೇ ಸ್ಫೂರ್ತಿ; ಅವರು ನಮ್ಮನ್ನೆಲ್ಲ ತುಂಬಾ ಪ್ರೀತಿಸುತ್ತಿದ್ದರು.

''ಸೋದರಿ ಕಲ್ಯಾಣಿಗೆ ಉತ್ತಮ ಹಾಸ್ಯಪ್ರಜ್ಞೆಯಿತ್ತು. ಅವರು ಉತ್ತಮ ಚಿತ್ರಕಲಾವಿದೆ ಕೂಡ ಆಗಿದ್ದರು. ನಾನು ನರ್ಸಿಂಗ್‌ನಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಲು ಹಾಗೂ ಇಲ್ಲಿ ನರ್ಸಿಂಗ್ ಆಡಳಿತವನ್ನು ಸೇರಲು ಸಹಾಯ ಮಾಡಿದರು. ಅವರು ಕಟ್ಟುನಿಟ್ಟಾಗಿ ಶಿಸ್ತುಬದ್ಧತೆಯನ್ನು ಆದೇಶಿಸುತ್ತಿದ್ದರು. ನಾವು ತಪ್ಪಿದಾಗಲೆಲ್ಲ ಚೆನ್ನಾಗಿ ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ನಮ್ಮ ತಪ್ಪಿಗಾಗಿ ಅವರು ಬಯ್ಯುತ್ತಿದ್ದುದು ಮಾತ್ರವಲ್ಲ, ಒಳ್ಳೆಯ ಕೆಲಸ ಮಾಡಿದಾಗ ಮುಕ್ತವಾಗಿ ಪ್ರಶಂಸೆ ಕೂಡ ಮಾಡುತ್ತಿದ್ದರು.



ಸೇವಾ ಪ್ರತಿಷ್ಠಾನದಲ್ಲಿ ಕಿರಿಯ ನರ್ಸ್‌ಗೆ ಚಹಾನೀಡುತ್ತಿರುವ ಸೋದರಿ ಕಲ್ಯಾಣಿ (ಎಡಭಾಗದಲ್ಲಿ)

''ಸೋದರಿ ಕಲ್ಯಾಣಿ ತಮ್ಮ ಕೆಲಸದಲ್ಲಿ ತುಂಬಾ ವ್ಯವಸ್ಥಿತರಾಗಿರುತ್ತಿದ್ದರು. ಪ್ರತಿಯೊಬ್ಬ ಸ್ಟಾಫ್ ನರ್ಸಗಳಿಗೆ ಸಂಬಂಧಪಟ್ಟ ಘಟನೆ, ಕಥೆಗಳನ್ನು ಜೋಪಾನವಾಗಿ ಇಟ್ಟುಕೊಳ್ಳುತ್ತಿದ್ದರು. ಅವುಗಳಲ್ಲಿ ಕೆಲಸ, ವರ್ತನೆ, ಸ್ವಭಾವ, ಸಾಮರ್ಥ್ಯ, ದೌರ್ಬಲ್ಯಗಳು – ಎಲ್ಲವೂ ಇರುತ್ತಿದ್ದವು. ಅವರ ಕೈಕೆಳಗೆ ಕೆಲಸ ಮಾಡುತ್ತಿದ್ದ ನರ್ಸ್‌ಗಳ ಬಗ್ಗೆ ಅವರಿಗೆ ಎಲ್ಲವೂ ಗೊತ್ತಿರುತ್ತಿತ್ತು. ಅವರ ವೃತ್ತಿಜೀವನ ಹಾಗೂ ವೈಯಕ್ತಿಕ ಜೀವನದ ಬಗ್ಗೆ ಅವರಿಗೆ ಪ್ರಾಮಾಣಿಕವಾದ ಕಾಳಜಿ ಇರುತ್ತಿತ್ತು.

''ಸೋದರಿ ಕಲ್ಯಾಣಿ ನಿಷ್ಪಕ್ಷಪಾತವಾಗಿ ಇರುತ್ತಿದ್ದರು. ಅರ್ಹ ಅಭ್ಯರ್ಥಿಗಳಿಗೆ ಅವರು 'ಅತ್ಯುತ್ತಮ ಸಿಬ್ಬಂದಿ' ಹಾಗೂ 'ಅತ್ಯುತ್ತಮ ವಾರ್ಡ್–ಸಿಸ್ಟರ್' ಪ್ರಶಸ್ತಿಗಳನ್ನು ದೊರಕಿಸಿ ಕೊಡುತ್ತಿದ್ದರು. ೧೯೮೭ರ ಸೆಪ್ಟೆಂಬರ್‌ನಿಂದ ೧೯೯೨ರ ನವೆಂಬರ್ ತನಕ ನಾನು ಅವರ ಆಡಳಿತದಲ್ಲಿ ಕೆಲಸ ಮಾಡಿದೆ. ಅವರು ನಿಜವಾಗಿಯೂ ಒಬ್ಬರು ಉತ್ತಮ ಅಧ್ಯಾಪಕಿ. ಅವರು ಚೆನ್ನಾಗಿ ಬಂಗಾಳಿ ಕಲಿತಿದ್ದರು, ಹಾಗೂ ನರ್ಸ್‌ಗಳಿಗೆ ಆ ಭಾಷೆಯಲ್ಲಿಯೇ ತರಗತಿ ನಡೆಸುತ್ತಿದ್ದರು. ರಾಮಕೃಷ್ಣ ಮಹಾಸಂಘದ ಎಲ್ಲ ಸಾಧುಗಳ, ಬ್ರಹ್ಮಚಾರಿಗಳ ಹಾಗೂ ಸಂನ್ಯಾಸಿನಿಯರ ಮೇಲೆ ಅವರಿಗೆ ಅಪಾರ ಗೌರವವಿತ್ತು. 'ಪ್ರೇಮಾನಂದ ವಾರ್ಡ್'ಗೆ ಸೇರಿಸಲಾಗುತ್ತಿದ್ದ ಸಾಧು–ಬ್ರಹ್ಮಚಾರಿಗಳ ಚಿಕಿತ್ಸೆಗೆ ಅವರು ವಿಶೇಷ ಕಾಳಜಿ ವಹಿಸುತ್ತಿದ್ದರು. ಬಡ ನರ್ಸಿಂಗ್ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ಮಾಡಲು ಅವರು ಅನೇಕ ಬಾರಿ ನಿಯಮಾವಳಿಗಳ ಹೊರಗಿನಿಂದಲೂ ಕೆಲಸ ಮಾಡುತ್ತಿದ್ದರು. ತಮ್ಮ ಡಯಾಬಿಟೀಸ್ ಕಾಯಿಲೆಗಾಗಿ ಅವರು ಇನ್ಸುಲಿನ್ ಚುಚ್ಚುಮದ್ದು ತೆಗೆದುಕೊಳ್ಳುತ್ತಿದ್ದರು; ಆದರೂ ಅವರು ಹೃತ್ಪೂರ್ವಕವಾಗಿ ಕೆಲಸ ಮಾಡುತ್ತಿದ್ದರು.

ಸ್ವಾಮಿ ವಿವೇಕಾನಂದರಿಗೆ ಸೋದರಿ ನಿವೇದಿತಾ ಹೇಗೆ ಆಧ್ಯಾತ್ಮಿಕ ಪುತ್ರಿಯಾಗಿದ್ದಳೋ ಅದೇ ರೀತಿ ಸ್ವಾಮಿ ದಯಾನಂದರಿಗೆ ಸೋದರಿ ಕಲ್ಯಾಣಿ ಇದ್ದಳು. ಸೋದರಿ ಕಲ್ಯಾಣಿ ಬರೆದ ' Swami Dayananda As I Saw Him'(A Candid study of A great Soul) ಎಂಬ ಲೇಖನವು ರಾಮಕೃಷ್ಣ ಮಿಷನ್ ಸೇವಾ ಪ್ರತಿಷ್ಠಾನದ ೧೯೭೯–೮೦ರ ಸ್ಮರಣಸಂಚಿಕೆಯಲ್ಲಿ ಪ್ರಕಟವಾಗಿತ್ತು. ರಾಮಕೃಷ್ಣ ಮಿಷನ್ನಿನ ಸಂಸ್ಥಾಪನೆಯಾಗಿ ೧೨೫ನೇ ವರ್ಷದ ಆಚರಣೆಯನ್ನು

(ಹಾಗೂ ಭಾರತದ ಸ್ವಾತಂತ್ರ್ಯದ ೭೫ನೇ ವರ್ಷ ಆಚರಣೆಯನ್ನು) ನೆರವೇರಿಸಿದ ಸಂದರ್ಭದಲ್ಲಿ ಈ ಸ್ಮರಣಸಂಚಿಕೆಯ ಮರು ಮುದ್ರಣ ಮಾಡಲಾಯಿತು. ಈ ಲೇಖನದಲ್ಲಿ ಸೋದರಿ ಕಲ್ಯಾಣಿ ಸ್ವಾಮಿ ದಯಾನಂದರ ವ್ಯಕ್ತಿತ್ವವನ್ನು ಅಮಿತ ಪ್ರೀತಿ, ಗೌರವಗಳಿಂದ ಕಂಡ ಬಗೆ ಆಯ್ದ ಭಾಗಗಳಲ್ಲಿ ನೀಡಲಾಗುತ್ತಿದೆ:

''ನನ್ನ ಪಾಲಿಗೆ ದಯಾನಂದರು 'ಭಯಾನಕ ವ್ಯಕ್ತಿ' (holy terror) ಆಗಿದ್ದರು. ನನ್ನನ್ನು ಅವರು ಆತಂಕದ ಅವಸ್ಥೆಗೆ ಒಳ ಪಡಿಸುತ್ತಿದ್ದರು. ಅವರ ಚಲನವಲನಗಳು ಸುಂಟರಗಾಳಿಯಂತೆ. ದೈನಂದಿನ ರೌಂಡ್ಸ್ ಗಳಲ್ಲಿ ಅವರೊಡನೆ ನಡೆದಾಡುವಾಗ ನಾನು ಅವರ ಹಿಂದೆ ಏದುಸಿರು ಬಿಡುತ್ತಾ ಓಡಾಡಬೇಕಾಗಿತ್ತು. ಅವರು ಒಂಟಿಸಲಗದಂತೆ ಮುಂದೆ ಹೋಗುತ್ತಿದ್ದರೆ, ನಾನು ಇಲಿಯಂತೆ ಅವರ ಹಿಂದೆ ಓಡಾಡುತ್ತಿದ್ದೆ.

''ಒಂದು ದಿನ ದೈನಂದಿನ ರೌಂಡ್ಸ್ ನಡೆಯುತ್ತಿದ್ದಾಗ, ಹೊರ ರೋಗಿಗಳ ವಿಭಾಗದಲ್ಲಿ ಏನೋ ವ್ಯತ್ಯಾಸವಾದಂತೆ ಮಹಾರಾಜರ ಹದ್ದಿನ ಕಣ್ಣುಗಳಿಗೆ ಕಂಡಿತು. ನಾನೇ ಈ ಬದಲಾವಣೆಗಳನ್ನು ಮಾಡಿರಬೇಕೆಂದು ಮಹಾರಾಜ್ ಭಾವಿಸಿದರು – ನಿಜವಾಗಿ ನಾನೇನೂ ಮಾಡಿರಲಿಲ್ಲ. ಎಲ್ಲರ ಮುಂದೆ ಅವರು ನನ್ನನ್ನು ಹಿಗ್ಗಾ ಮುಗ್ಗಾ ಬೈದುಬಿಟ್ಟರು. ಅವರಿಗೆ ನಿಜಸಂಗತಿಯನ್ನು ತಿಳಿಸಿ ಕೊಡುವ ಧೈರ್ಯ ಯಾರಿಗೂ ಇರಲಿಲ್ಲ. ಅವರು ನನಗೆ 'get out' ಎಂದು ಕೂಡ ಹೇಳಿಬಿಟ್ಟರು. ನನಗೆ ತುಂಬಾ ಅವಮಾನ ವಾಗಿತ್ತು. ಕಣ್ಣೀರು ತುಂಬಿ ಬಂದರೂ ಅದನ್ನು ಹರಿಯಬಿಡದೆ, ನನ್ನ ಆಫೀಸಿಗೆ ನಾನು ಹಿಂದಿರುಗಿದೆ. ನಾನು ಕೆಲಸ ಬಿಟ್ಟುಬಿಡ ಬೇಕೆಂದು ಎಲ್ಲರೂ ಹೇಳಿದರು. ನಾನೇಕೆ ಬಿಡಲಿ? ನನಗೆ ಅಂಥ ಆಲೋಚನೆಯೇ ಬಂದಿರಲಿಲ್ಲ. ನನ್ನ ಹಾದಿಯಲ್ಲೆಲ್ಲ ಗುಲಾಬಿ ಹೂವೇ ಇರಬೇಕೆಂದು ನಾನೇಕೆ ನಿರೀಕ್ಷಿಸಲಿ? ಒಬ್ಬರು ಹಿರಿಯ ಸಾಧುಗಳ ಮಾತನ್ನು ನಾನು ನೆನೆಪಿಸಿಕೊಂಡೆ: ''ಕೇವಲ ಪ್ರೀತಿ ಪಾತ್ರರಾದ ವ್ಯಕ್ತಿ ಮಾತ್ರವೇ ಬಯ್ಯಬಹುದು – ಅದು ಎಷ್ಟೇ ಅಸ ಮರ್ಥನೀಯವಾದರೂ ಕೂಡ.'' ಕ್ರಮೇಣ ನಾನು ಅವರ ಅಸಾ ಧಾರಣ ವ್ಯಕ್ತಿತ್ವ ಎಷ್ಟೊಂದು ಆಳವಾದದ್ದು ಎಂದರಿತು, ಅದನ್ನು ಗೌರವಿಸತೊಡಗಿದೆ. ಅವರ ನಿಸ್ವಾರ್ಥ ಜೀವನವನ್ನು ಗಮನಿಸಿದಷ್ಟೂ ನನ್ನ ಕೆಲಸದಲ್ಲಿ ನನಗೆ ಸಂತಸ, ತೃಪ್ತಿಗಳು ಲಭಿಸತೊಡಗಿದವು.

''ಅವರಲ್ಲೊಂದು ಹಳೆಯ ಕಾಲದವರ ಘನತೆಯ ಸ್ಪರ್ಶ ವಿತ್ತು. ಅವರಲ್ಲಿ ಭಾರತೀಯ ನಾರಿಯರ ಬಗ್ಗೆ ಅಗಾಧ ಗೌರವ ವಿತ್ತು. ಅವರ ನಿಜವಾದ ಸಮಸ್ಯೆಗಳ ಅರಿವು ಅವರಿಗಿತ್ತು. ಅವರ ನಿರಂತರ ಮಾನವೀಯ ಭಾವನೆಯಿಂದಾಗಿ ಅವರು ಒಂದು ಮಹಾನ್ ಸೇವಾ ಸಂಸ್ಥೆಯನ್ನು ಸ್ಥಾಪಿಸಲು ಸಾಧ್ಯವಾಯಿತು. ವಿಶೇಷವಾಗಿ ಮಕ್ಕಳ ಹಾಗೂ ತಾಯಂದಿರ ಕಲ್ಯಾಣಕ್ಕಾಗಿ ಈ ಸಂಸ್ಥೆ ಹೆಚ್ಚು ಗಮನ ನೀಡುತ್ತದೆ. ರಾಮಕೃಷ್ಣ ಮಿಷನ್ನಿನಲ್ಲಿ ಅವರು ಮಾಡಿದ ಅಸಾಧಾರಣ ಕಾರ್ಯವು ತಾಯಂದಿರ, ಹೆರಿಗೆಯ ಸೇವೆ ಚಿಕಿತ್ಸೆಗಳಲ್ಲಿ ಹೊಸದಾದ ಒಂದು ಗೌರವ ಸ್ಥಾನವನ್ನು ವಾಸ್ತವಿಕ ನೆಲೆ ಯಲ್ಲಿ ತಂದುಕೊಟ್ಟಿದೆ. ಈ ಸಂಸ್ಥೆಯು ನೀಡಿದ ಸೇವೆಯನ್ನು ಪಡೆದ ಹಲವಾರು ಮೂರು ತಲೆಮಾರಿನ ಕುಟುಂಬಗಳು ಕೃತಜ್ಞತೆ ಯಿಂದಲೂ ಹೆಮ್ಮೆಯಿಂದಲೂ ಸ್ಮರಿಸಿಕೊಳ್ಳುತ್ತವೆ.''

ಸೋದರಿ ಕಲ್ಯಾಣಿ ಮುಂದುವರಿದು ಹೇಳುತ್ತಾಳೆ: ''ಸ್ವಾಮಿ ದಯಾನಂದರು ಪ್ರಚಾರವನ್ನು ದ್ವೇಷಿಸುತ್ತಿದ್ದರು. ಭಾಷಣ ಮಾಡು ವುದು, ಸಭೆ ನಡೆಸುವುದು ಅವರಿಗೆ ಹಿಡಿಸುತ್ತಿರಲಿಲ್ಲ. ಸಂಸ್ಥೆಯನ್ನು ಸ್ಥಾಪಿಸುವ ಮಹತ್ತರ ಹೊಣೆಗಾರಿಕೆ ಅವರ ಹೆಗಲ ಮೇಲಿದ್ದು ದರಿಂದ, ಅವರು ಅತ್ಯಂತ ವಿರಳವಾಗಿ ಹೊರಗೆಲ್ಲಾದರೂ ಹೋಗು ತ್ತಿದ್ದರು. ಅವರ ಪಾಲಿಗೆ ಅದು ಭಗವಂತನ ಕೆಲಸ.

''ಶೀಘ್ರದಲ್ಲೇ ಮಹಾರಾಜರು ನನ್ನ ಮೇಲೆ ವಿಶ್ವಾಸವನ್ನು ತಾಳಿದರು. ಹಲವು ವಿಷಯಗಳಲ್ಲಿ ಅವರು ನನ್ನೊಂದಿಗೆ ಚರ್ಚಿಸ ತೊಡಗಿದರು. ಆದೇಶ ಪಾಲನೆಯಲ್ಲಿ ಅವರು ತೆಂಗಿನಕಾಯಿ ಕರಟ ದಂತೆ ಹೊರಗಿನಿಂದ ಅತಿ ಕಠಿಣ; ಆದರೆ ಆಂತರ್ಯದಲ್ಲಿ ಬಹಳ ಮೃದು. ಅವರಿಗೆ ಏನಾದರೂ ಸೇವೆ ಮಾಡಿದರೆ ಅವರು ಅದ ನ್ನೆಂದಿಗೂ ಮರೆಯುತ್ತಿರಲಿಲ್ಲ. ಅದನ್ನು ಅವರು ಹಲವು ರೀತಿ ಯಲ್ಲಿ ಸ್ಮರಿಸಿಕೊಳ್ಳುತ್ತಿದ್ದರು. ಒಂದು ಸಲ ಅವರ ಸೇವಕನಿಗೆ ಕಾಯಿಲೆಯಾಗಿ, ಅವನನ್ನು ಆಸ್ಪತ್ರೆಗೆ ಸೇರಿಸಲಾಯಿತು. ಪ್ರತಿದಿನ ಎರಡು ಬಾರಿ ಸ್ವಾಮೀಜಿ ಅವನನ್ನು ಭೇಟಿಯಾಗಿ, ಅವನಿಗೆ ಧೈರ್ಯ ಹೇಳುತ್ತಿದ್ದರು. ಬೆಳಿಗ್ಗೆ ನನಗೆ ಫೋನ್ ಮಾಡಿ ಅವನ ಬಗ್ಗೆ ವಿಚಾರಿಸುತ್ತಿದ್ದರು.

''ಒಂದು ರಾತ್ರಿ ಬಿರುಗಾಳಿಯೆದ್ದು, ಕೊಲ್ಕತ್ತದಲ್ಲಿ ಲಘು ಭೂ ಕಂಪನವುಂಟಾಯಿತು. ನನ್ನ ಬಳಿ ಇದ್ದ ಭಗವಂತನ ಭಾವಚಿತ್ರದ ಮಂದೆ ಓಡಿಹೋಗಿ ಕುಳಿತು ನಾನು ಪ್ರಾರ್ಥಿಸತೊಡಗಿದೆ. ಆಗ ಎಲ್ಲ ಸಾಧುಗಳಿಗೂ ಮಹಾರಾಜರೊಂದಿಗೆ ಆಸ್ಪತ್ರೆಯ ಕಡೆಗೆ ಧಾವಿಸುತ್ತಿದ್ದುದನ್ನು ನಾನು ನೋಡಿದೆ. ನಾನೂ ಅತ್ತ ಧಾವಿಸಿದೆ. ರೋಗಿಗಳೆಲ್ಲಾ ಅತ್ತಿಂದಿತ್ತ ಓಡಾಡುತ್ತಿದ್ದರು. ಸಾಧುಗಳೆಲ್ಲ ಅವರಿಗೆ ಸಮಾಧಾನ ಹೇಳುತ್ತಿದ್ದರು. ಅದು ದೇವದುರ್ಲಭ ದೃಶ್ಯ! ನಾನೂ ನನಗೆ ತಿಳಿದಂತೆ ಅವರಿಗೆಲ್ಲ ಸಮಾಧಾನ ಹೇಳಿದೆ. ಅಂದು ರಾತ್ರಿ ನನ್ನ ಕಣ್ಣುಗಳು ತೆರೆದುವು – ಭಾವಚಿತ್ರದಲ್ಲಿರುವ ಭಗವಂತನ ಪೂಜೆಗಿಂತ, ಮಾನವನಲ್ಲಿರುವ ಭಗವಂತನ ಪೂಜೆಯೇ ಅತ್ಯಂತ ಹೆಚ್ಚಿನದು ಎಂದು ನನಗರ್ಥವಾಯಿತು! ಮಾನವನೇ ಭಗವಂತ ನೆಂಬ ಭಾವನೆಯಲ್ಲಿ ಅವನ ಸೇವೆ ಮಾಡುವುದು–ಇದೇ ನಿಸ್ವಾರ್ಥ ಸೇವೆಯ ಪ್ರಾಯೋಗಿಕ ಪ್ರಕಟಣೆಯಾಗಿದೆ.

''ಮಹಾರಾಜರಲ್ಲಿ ಪಾಶ್ಚಾತ್ಯ–ಪೌರ್ವಾತ್ಯ ಮೌಲ್ಯಗಳೆರಡರ ಸುಖಕರ ಸಮನ್ವಯವಿದೆ. ಸಾಂಪ್ರದಾಯಿಕ ಜೀವನ ಒಂದು ರೀತಿ ಅವರಿಗೆ ಇಷ್ಟವೆನಿಸಿತ್ತು; ಉತ್ತಮ ಕುಟುಂಬಗಳಿಂದ ಬಂದ ಹೆಣ್ಣು ಮಕ್ಕಳನ್ನು ನರ್ಸಿಂಗ್‌ನಲ್ಲಿ ತರಬೇತಿ ಮಾಡಲು ಅವರು ಸದಾ ಉತ್ಸುಕರಾಗಿದ್ದರು. ಗಂಡು–ಹೆಣ್ಣು ಕೆಲಸಗಾರರು ಸ್ವೇಚ್ಛೆಯಿಂದ ಬೆರೆಯುವುದನ್ನು ಅವರು ಇಷ್ಟಪಡುತ್ತಿರಲಿಲ್ಲ. ಈ ಬಗೆ ಶಿಸ್ತನ್ನು ಈಗಲೂ ಇಲ್ಲಿ ಕಾಪಾಡಿಕೊಂಡು ಬರಲಾಗಿದೆ. ಇದರಿಂದ ಹೆಚ್ಚಿನ ಲಾಭವುಂಟಾಗಿದೆ – ಇದರಿಂದ ಎರಡೂ ವರ್ಗಗಳಲ್ಲಿ ಹೆಚ್ಚಿನ ಗೌರವ, ಉತ್ತಮ ಬಾಂಧವ್ಯ ಸಾಧ್ಯವಾಗಿದೆ.

''೧೯೬೫ರಲ್ಲಿ ಮಹಾರಾಜರು ಪ್ರಾಸ್ಟೇಟ್‌ಗೆ ಸಂಬಂಧಿಸಿದ ಶಸ್ತ್ರಚಿಕಿತ್ಸೆಗೆ ಒಳಗಾದರು. ಅದು ಅವರ ಪಾಲಿಗೆ ಅತ್ಯುತ್ತಮ ಸಮಯವಾಗಿತ್ತು. ನಾನು ನೋಡಿದ ರೋಗಿಗಳೆಲ್ಲ ಅವರು

ಅತ್ಯಂತ ಸಹಕರಿಸುವವರಾಗಿದ್ದರು. ಅವರು ಸ್ವಲ್ಪವೂ ಗೊಣಗಾಡಲಿಲ್ಲ, ಏನನ್ನೂ ಬಯಸಲಿಲ್ಲ. ನಮ್ಮ ಶುಶ್ರೂಷೆಗೆ ಸಂಪೂರ್ಣವಾಗಿ ಅವರು ಒಪ್ಪಿಸಿಕೊಂಡಿದ್ದರು. ಅವರು ಎಷ್ಟೊಂದು ಓದಿಕೊಂಡಿದ್ದರು ಎಂದು ನನಗೆ ತಿಳಿದದ್ದು ಆಗಲೇ. ವುಡ್‌ಹೌಸ್ ಸರಣಿ, ಟಾಮ್ ಸಾಯರ್‌ನ ಸಾಹಸ, ಪಿಕ್‌ವಿಕ್ ಪೇಪರ್ಸ್ ಮುಂತಾದ ಪುಸ್ತಕಗಳನ್ನು ಓದುತ್ತ ಅವರು ಮುಗ್ಧ ಸಂತಸವನ್ನು ಹೊಂದುತ್ತಿದ್ದರು. ಅವುಗಳನ್ನೆಲ್ಲ ಅವರು ಮತ್ತೊಮ್ಮೆ ಆಸಕ್ತಿಯಿಂದ ಓದಿಬಿಟ್ಟರು. ನಾನು ಸಂತೋಷದಿಂದ ನನ್ನ ಸಂಗ್ರಹದಿಂದ ಆ ಪುಸ್ತಕಗಳನ್ನು ಅವರಿಗೆ ಓದಲು ಕೊಟ್ಟೆ. ಆಸ್ಪತ್ರೆಯಿಂದ ಹಿಂದಿರುಗಿ ಬಂದಾಗ ಅವರು ಮಧುರವಾಗಿ ಹೇಳಿದ್ದರು, ನನ್ನಿಂದ ಸೇವೆಯನ್ನು ಮಾಡಿಸಿಕೊಂಡ ಮೇಲೆ ಬೇರೆ ಯಾರ ಸೇವೆಯೂ ಅವರಿಗೆ ಸರಿಹೋಗದು ಎಂಬುದಾಗಿ. ಏನೇ ಇರಲಿ, ಕೆಲವು ವರ್ಷಗಳ ನಂತರ ಅವರು ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಾಗ ನನ್ನ ಬಳಿ ಇದ್ದ ಹುಡುಗಿಯರು ಅವರ ಸೇವೆ ಮಾಡಿದ್ದರು. ಅವರ ಸೇವೆಯನ್ನು ಕೂಡ ಅವರು ಮೆಚ್ಚಿಕೊಂಡಿದ್ದರು ಎಂದು ತಿಳಿದಾಗ ನನಗೆ ಆನಂದವಾಯಿತು. ಶುಶ್ರೂಷೆ ಮಾಡುವಾಗ ನಾವು ತುಸು ಅವ್ಯೆಯಕ್ತಿಕ ಭಾವದಿಂದ ಇರಬೇಕಾಗುತ್ತದೆ. ಆದರೂ ಆ ಸಮಯದಲ್ಲಿ ಅವರ ಅಸಾಧಾರಣ ಪ್ರೀತಿಗೆ ನಾನು ಶರಣಾಗಿದ್ದೆ; ಹಾಗೂ ಅವರು ನರಳುವುದನ್ನು ನನಗೆ ನೋಡಲಾಗುತ್ತಿರಲಿಲ್ಲ. ಶಸ್ತ್ರಚಿಕಿತ್ಸೆಗೆ ಕಣ್ಣಿನ ಸುತ್ತ ಸ್ಥಾನೀಯ ಅರಿವಳಿಕೆ ಕೊಡುವ ಸಮಯದಲ್ಲಿ ಸ್ವಲ್ಪವೂ ಬೆಚ್ಚಿ ಅಲುಗಾಡಲಿಲ್ಲ. ಆದರೆ ನನಗೇ ಪ್ರಜ್ಞೆ ತಪ್ಪಿದಂತಾಯಿತು! ಅಲ್ಲಿಯತನಕವೂ ನನ್ನ ಬಗ್ಗೆ ನಾನು ಬಹಳ ಧೈರ್ಯಶಾಲಿ ಎಂದುಕೊಂಡಿದ್ದೆ, ನನ್ನ ತಾಯಿಗೆ ಒಂದು ಪ್ರಮುಖ ಶಸ್ತ್ರ ಚಿಕಿತ್ಸೆ ಮಾಡುವಾಗ ಕೂಡ ನಾನು ಸಹಾಯಕಳಾಗಿದ್ದೆ.''

ಈ ರೀತಿಯಲ್ಲಿ ಸೋದರಿ ಕಲ್ಯಾಣಿ ಸೇವಾಪ್ರತಿಷ್ಠಾನದಲ್ಲಿ ಮೂರು ದಶಕಗಳ ಕಾಲ ನಿರಂತರ ಸೇವೆ ಸಲ್ಲಿಸಿದಳು. ಅವಳ ಜೀವನವು 'ತನ್ನ ಸಾಕ್ಷಾತ್ಕಾರಕ್ಕಾಗಿ ಮತ್ತು ಜಗತ್ತಿನ ಹಿತಕ್ಕಾಗಿ' ಎಂಬ ಆದರ್ಶದಿಂದ ಸ್ಫೂರ್ತಿ ಪಡೆದು ತಮ್ಮ ಬದುಕನ್ನೇ ಪರಿವರ್ತಿಸಿಕೊಂಡ ತರುಣಿಯೊಬ್ಬಳ ಸ್ಫೂರ್ತಿದಾಯಕ ಕಥೆಯಾಗಿದೆ.

ಸೋದರಿ ಕಲ್ಯಾಣಿ ಈ ಪ್ರಸಿದ್ಧ ವೈದ್ಯಕೀಯ ಸಂಸ್ಥೆಯನ್ನು ಸೇರಿಕೊಂಡಾಗ ಅವಳಿಗೆ ೨೮ ವರ್ಷ ವಯಸ್ಸು. ಸೇವಾ ಪ್ರತಿಷ್ಠಾನದ ಇತಿಹಾಸದಲ್ಲಿ ಅವಳದು ಭವ್ಯವ್ಯಕ್ತಿತ್ವ. ಬದುಕಿದ್ದಾಗಲೇ ದಂತಕಥೆಯಾದವಳು ಆಕೆ. ಸೇವಾಪ್ರತಿಷ್ಠಾನದ ಮೇಲೆ ಅವಳಿಗಿದ್ದ ಪ್ರೀತಿ ಹಾಗೂ ಸಮರ್ಪಣಾಭಾವವನ್ನು ಜನರು ಶ್ರದ್ಧೆ, ಗೌರವದಿಂದ ನೆನೆಯುತ್ತಾರೆ. ಶ್ರೀರಾಮಕೃಷ್ಣರು ತಮ್ಮ ಕೆಲಸಕ್ಕಾಗಿ ಆರಿಸಿಕೊಂಡ ವ್ಯಕ್ತಿಗಳಲ್ಲಿ ಮಾತ್ರವೇ ಸಂಸ್ಥೆಯ ಬಗ್ಗೆ ಅಷ್ಟರಮಟ್ಟಿನ ಅನನ್ಯ ಭಾವವನ್ನು ಕಾಣುತ್ತೇವೆ.

ಸೋದರಿ ಕಲ್ಯಾಣಿ ಸಂಸ್ಥೆಯೊಂದಿಗೆ ಒಂದಾಗಿದ್ದಳು. ನರ್ಸಿಂಗ್ ಸ್ಕೂಲಿನ ಪ್ರಿನ್ಸಿಪಾಲ್ ಆಗಿ, ಬೃಹತ್ ಮೆಡಿಕಲ್ ಸಂಸ್ಥೆಯ ಮೆಡಿಕಲ್ ಸೂಪರಿಂಟೆಂಡೆಂಟ್ ಆಗಿ ಅವಳು ನಿಜವಾದ ಕಾರ್ಯದಕ್ಷಳಾಗಿದ್ದಳು; ಕಟ್ಟುನಿಟ್ಟಿನ ಶಿಸ್ತುಪಾಲಕಿಯಾಗಿದ್ದಳು. ತಮ್ಮ ಶಿಷ್ಯೆಯರ ಸರ್ವತೋಮುಖ ಬೆಳವಣಿಗೆಗಾಗಿ ಅವಳು ಅವಿರತವಾಗಿ ಶ್ರಮಿಸಿದಳು. ವ್ಯಕ್ತಿತ್ವ ನಿರ್ಮಾಣ ಮಾಡುವಂತಹ ಶಿಕ್ಷಣ ಅವರಿಗೆ ಲಭಿಸಲಿ ಎಂಬುದೇ ಅವಳ ಆಶಯವಾಗಿತ್ತು. ಅವಳು ಅಷ್ಟೇ, ನಯ ನಾಜೂಕುಗಳಿಂದ ಕೂಡಿದವಳೂ ಆಗಿದ್ದಳು.

ಸೋದರಿ ಕಲ್ಯಾಣಿ ನಿಜವಾದ ಕರ್ಮಯೋಗಿನಿ. ಅವಳು ತನ್ನ ಇಡೀ ಜೀವನವನ್ನು ರಾಮಕೃಷ್ಣ ಮಹಾಸಂಘದ ಸೇವೆಗಾಗಿ ಅರ್ಪಿಸಿದಳು. ನರ್ಸಿಂಗ್ ವಿಭಾಗಕ್ಕೆ ಹಾಗೂ ಸಂಸ್ಥೆಯ ಬೆಳವಣಿಗೆಗೋಸ್ಕರ ಅವಳು ಶಿಸ್ತುಬದ್ಧವಾಗಿ ವಹಿಸಿದ ಅಪಾರ ಪರಿಶ್ರಮವು ಸೇವಾ ಪ್ರತಿಷ್ಠಾನದ ಸಂಪರ್ಕಕ್ಕೆ ಬಂದ ಎಲ್ಲ ಮನಸ್ಸಿನಲ್ಲಿ ಅಚ್ಚೊತ್ತಿ ನಿಂತಿದೆ. ಅವಳು ತನ್ನ ಸೇವೆಗಾಗಿ ಎಂದೂ ಹಣವನ್ನು ಸ್ವೀಕರಿಸಲಿಲ್ಲ ಎಂದು ನಾನು ನನ್ನ ಹಿರಿಯರಿಂದ ಕೇಳಿದ್ದೇನೆ. ಆದರೂ ಅವಳ ಮೂಲಭೂತ ಆವಶ್ಯಕತೆಗಳಿಗೆ ಎಂದೂ ಕೊರತೆಯುಂಟಾಗದಂತೆ ಸ್ವಾಮಿ ದಯಾನಂದರು ಹಾಗೂ ಸ್ವಾಮಿ ಗಹನಾನಂದರು ಗಮನ ಕೊಟ್ಟಿದ್ದರು.

ಎಲ್ಲ ನರ್ಸಿಂಗ್ ಕೆಲಸಗಾರರಿಗೆ, ಎಲ್ಲ ವೈದ್ಯಕೀಯ ವೃತ್ತಿಯವರಿಗ ಸೋದರಿ ಕಲ್ಯಾಣಿ ಆದರ್ಶ ವ್ಯಕ್ತಿಯಾಗಿದ್ದಳು. ಒಂದು ಸಂಸ್ಥೆಗೆ ಹೇಗೆ ವಿಧೇಯರಾಗಿರಬೇಕು, ದೀರ್ಘಕಾಲ ಹೇಗೆ ಪ್ರಶ್ನಾತೀತವಾಗಿ ಸೇವೆಗೆ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಎಂಬುದನ್ನು ಅವಳ ಜೀವನವು ನಮಗೆ ಕಲಿಸಿಕೊಡುತ್ತದೆ.

೨೦೦೧ರ ಮೇ ೫ರಂದು ಅವಳು ತನ್ನ ೬೭ನೇ ವಯಸ್ಸಿನಲ್ಲಿ ನಿಧನಳಾದಳು. ಅವಳ ಸೇವಾಪರ ಜೀವನ, ಸಮರ್ಪಣಭಾವ, ನಿಸ್ವಾರ್ಥತೆ, ದೋಷಾರಹಿತ ಬುದ್ಧಿಮತ್ತೆ, ಅಹಂಕಾರ ಶೂನ್ಯತೆ ಹಾಗೂ ಅತ್ಯುತ್ತಮ ವೃತ್ತಿಪರತೆ ಇವು ಸಹಸ್ರಾರು ಮಂದಿ ಮಹಿಳೆಯರಿಗೆ, ವಿಶೇಷವಾಗಿ ನರ್ಸ್‌ಗಳಿಗೆ ಆದರ್ಶಪ್ರಾಯವಾಗಿದೆ.

ಸ್ವಾಮಿ ವಿವೇಕಾನಂದರು ಒಂದು ಸಲ ಹೇಳಿದ್ದರು: ''ಭಾರತದಲ್ಲಿ ಶಕ್ತಿಯ ಪುನರುಜ್ಜೀವನಕ್ಕಾಗಿ ಶ್ರೀಮಾತೆ ಶಾರದಾದೇವಿಯರ ಜನನವಾಗಿದೆ. ಅವರನ್ನೇ ಕೇಂದ್ರಬಿಂದುವಾಗಿಸಿಕೊಂಡು ಮತ್ತೊಮ್ಮೆ ಈ ಜಗತ್ತಿನಲ್ಲಿ ಗಾರ್ಗಿ, ಮೈತ್ರೇಯಿಯರು ಜನಿಸುವರು. ಭಾರತದ ಮಣ್ಣಿನಲ್ಲಿ, ಸೀತಾ-ಸಾವಿತ್ರಿಯವರ ನೆಲದಲ್ಲಿ ಮಹಿಳೆಯರ ನಡುವೆ ಈಗಲೂ ಅಂಥ ಗೌರವಕ್ಕೆ ಪಾತ್ರರಾದ ಮಹಿಳೆಯರನ್ನು ಕಾಣಬಹುದು. ಪ್ರಪಂಚದ ಬೇರೆಲ್ಲೂ ಅಂಥವರನ್ನು ನಾನು ಕಾಣಲಾರೆ.''

ಸೋದರಿ ಕಲ್ಯಾಣಿ ಅಂತಹ ಒಂದು ಶ್ರೇಷ್ಠ ವ್ಯಕ್ತಿತ್ವ. ಬಾಹ್ಯದಲ್ಲಿ ಅವಳು ಅತ್ಯಂತ ಶಿಸ್ತುಬದ್ಧರಾದ, ಸಮರ್ಥರಾದ, ನರ್ಸಿಂಗ್ ವೃತ್ತಿಗೆ ಬದ್ಧಳಾದ ವ್ಯಕ್ತಿ. ಅಂತರಂಗದಲ್ಲಿ ಅವಳು ಆಳವಾದ, ಪರಿಶುದ್ಧ ಸಂನ್ಯಾಸಿನಿ, ಶ್ರೀರಾಮಕೃಷ್ಣರ ಹಾಗೂ ಶ್ರೀಶಾರದಾ ದೇವಿಯವರ ಪುಟ್ಟ ಮಗು. *

**(ಕೃತಜ್ಞತೆ: ಈ ಲೇಖನವನ್ನು ರಚಿಸುವಲ್ಲಿ ಲೇಖಕನಿಗೆ ನೆರವಾದ ಸ್ವಾಮಿ ಮೋಕ್ಷವ್ರತಾನಂದ, ಅಧ್ಯಕ್ಷರು, ಶ್ರೀರಾಮಕೃಷ್ಣ ಆಶ್ರಮ, ತಿರುವನಂತಪುರ; ಸ್ವಾಮಿ ನಿತ್ಯಕಾಮಾನಂದ, ಅಧ್ಯಕ್ಷರು, ರಾಮಕೃಷ್ಣ ಮಿಷನ್ ಸೇವಾ ಪ್ರತಿಷ್ಠಾನ, ಹಾಗೂ ಶ್ರೀಮತಿ ಉಷಾ ಮೆನನ್ ಅವರಿಗೆ ಕೃತಜ್ಞತೆಗಳು.)**

***(ಅನುವಾದ: ಸ್ವಾಮಿ ಜ್ಞಾನಯೋಗಾನಂದ)***

# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 37


**ಸ್ವಾಮಿ ನಿತ್ಯಸ್ಥಾನಂದ**

### ಮತಾಂಧತೆ

**ಶ್ರೀರಾಮಕೃಷ್ಣರು:** ‘‘ಭಕ್ತಿಯೇ ಸಾರವಸ್ತು. ಸರ್ವದಾ ಭಗವಂತನ ನಾಮಗುಣ ಸಂಕೀರ್ತನೆ ಮಾಡುತ್ತ ಮಾಡುತ್ತ ಇದ್ದರೆ ಭಕ್ತಿ ದೊರೆತುಬಿಡುತ್ತದೆ. ಆಹಾ! ಶಿವನಾಥ ಎಂಥ ಭಕ್ತ! ಸಕ್ಕರೆ ರಸದಲ್ಲಿ ನೆನೆದ ಛಾನಾದ ವಡೆಯ ಹಾಗೆ ಆತ ಭಕ್ತಿರಸದಲ್ಲಿ ನೆಂದುಹೋಗಿಬಿಟ್ಟಿದ್ದಾನೆ.’’ *(ಶ್ರೀರಾಮಕೃಷ್ಣ ವಚನವೇದ, ಸಂಪುಟ ೧, ಪು. ೧೧೪)*

ಮೊದಲು ಮನಸ್ಸೆಂಬ ಹಾಲನ್ನು ತಪೋಽಗ್ನಿಯಲ್ಲಿ ಬಿಸಿ ಮಾಡಬೇಕು. ಅನಂತರ ವಿವೇಕವೆಂಬ ಹುಳಿಯನ್ನು ಹಿಂಡಬೇಕು. ಆಗ ನೀರು ಮತ್ತು ಛಾನ ಬೇರೆಯಾಗುತ್ತದೆ. ನಂತರ ಛಾನವನ್ನು ಉಂಡೆ ಮಾಡಿ ಜ್ಞಾನದಿಂದ ಕುದಿಯುತ್ತಿರುವ ತೈಲದಲ್ಲಿ ಬೇಯಿಸಬೇಕು. ಮುಂದೆ ಅದನ್ನು ಭಕ್ತಿಯ ಸಕ್ಕರೆ ಪಾಕದಲ್ಲಿ ತೋಯಿಸಬೇಕು. ಆಗ ದಿವ್ಯಾನುಭವವೆಂಬ ರಸಗೊಲ್ಲ ಸಿದ್ಧವಾಗುತ್ತದೆ. ಇಂತಹ ಭಕ್ತಿರಸಾಮೃತವನ್ನು ಸವಿಯುವವನ ಮನಸ್ಸಿನಲ್ಲಿ ಮತಾಂಧತೆಗೆ ಅವಕಾಶವೇ ಇರುವುದಿಲ್ಲ. ಮತಾಂಧತೆ ಮತ್ತು ಮತೀಯ ಕಲಹಗಳನ್ನು ಹೋಗಲಾಡಿಸಬೇಕಾದರೆ ಧರ್ಮದ ಆಧ್ಯಾತ್ಮಿಕ ಅಂಶವನ್ನು ಒತ್ತಿ ಹೇಳಬೇಕಾಗುತ್ತದೆ. ಉಳಿದ ಗೌಣಾಂಶಗಳೇ ಪ್ರಧಾನವಾಗಬಾರದು. ಇದೇ ಕಾರಣದಿಂದಲೇ ಶ್ರೀರಾಮಕೃಷ್ಣರು ಭಕ್ತಿಯೇ ಸಾರವಸ್ತು ಎಂದು ಹೇಳಿ ಮುಂದುವರಿದು ಹೇಳುತ್ತಾರೆ: ‘‘ನನ್ನ ಧರ್ಮವೇ ಸರಿ, ಉಳಿದವರದೆಲ್ಲ ಒಳ್ಳೆಯದಲ್ಲ ಎಂಬ ಭಾವನೆ ಒಳ್ಳೆಯದಲ್ಲ. ಎಲ್ಲ ಮಾರ್ಗಗಳಿಂದಲೂ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಬಹುದು. ಹೃತ್ಪೂರ್ವಕ ವ್ಯಾಕುಲತೆ ಇತ್ತು ಎಂದರೆ ದೊರೆತುಬಿಡುತ್ತದೆ. ಮಾರ್ಗಗಳೂ ಅನೇಕ, ಹಾಗೆಯೇ ಮತಗಳೂ ಅನೇಕ.’’ *(ಅಲ್ಲೇ, ಪು. ೧೧೪)* ಆದರೆ ಗುರಿ ಮಾತ್ರ ಒಂದೇ. ನಾವು ಮಾರ್ಗದ ವಿಷಯದಲ್ಲಿಯೇ ಕಚ್ಚಾಡುತ್ತಿದ್ದರೆ ಮಾರ್ಗದಲ್ಲಿಯೇ ಉಳಿಯುತ್ತೇವೆ, ಗುರಿಮುಟ್ಟುವುದಿಲ್ಲ. ನಿಜ, ಅನೇಕರಿಗೆ ಗುರಿ ಮುಟ್ಟುವ ಆದರ್ಶವೇ ಇರುವುದಿಲ್ಲ!

ಈ ಮತಾಂಧತೆಯು ಭಗವತ್ ಶ್ರದ್ಧೆಯ ಕೊರತೆಯಿಂದ ಉಂಟಾಗುತ್ತದೆ ಎಂದು ಕೆಲವರ ಅಭಿಪ್ರಾಯ. ಈ ಅಶ್ರದ್ಧೆಯಿಂದಾಗಿ ತಮ್ಮ ಧರ್ಮವನ್ನು ರಕ್ಷಿಸಿಕೊಳ್ಳಬೇಕೆಂಬ ಉತ್ಸಾಹ ಉಗ್ರರೀತಿಯಲ್ಲಿ ಅಭಿವ್ಯಕ್ತವಾಗುತ್ತದೆ. ಭಕ್ತಿಯ ಪ್ರಾರಂಭಾವಸ್ಥೆಯಲ್ಲಿ, ಇನ್ನೂ ಶ್ರದ್ಧೆಯು ದೃಢವಾಗಿರದ ಸ್ಥಿತಿಯಲ್ಲಿ, ಭಗವತ್ ಪ್ರೀತಿಯು ಅನ್ಯಮತ ದ್ವೇಷದ ರೂಪದಲ್ಲಿ ವ್ಯಕ್ತವಾಗುವ ಸಂಭವವುಂಟು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: ‘‘ಇದರಲ್ಲಿ (ಭಕ್ತಿಯಲ್ಲಿ) ಇರುವ ದೊಡ್ಡದೊಂದು ಅನಾನುಕೂಲವೆಂದರೆ ಪ್ರಾರಂಭದ ಸ್ಥಿತಿಯಲ್ಲಿ ಇದು ಹಲವು ವೇಳೆ ಮತಭ್ರಾಂತಿಯಲ್ಲಿ ಪರ್ಯವಸಾನವಾಗುವ ಅಪಾಯವಿರುವುದು. ಹಿಂದೂ, ಮಹಮ್ಮದೀಯ ಮತ್ತು ಕ್ರೈಸ್ತರಲ್ಲಿ ಇರುವ ಬಹುಪಾಲು ಮತಭ್ರಾಂತ ತಂಡವೆಲ್ಲ ಇಂತಹ ಭಕ್ತಿಯ ಕೆಳಗಿನ ವರ್ಗದಿಂದ ಬಂದದ್ದು. ನಾವು ಪ್ರೀತಿಸುವ ವಸ್ತುವಿನ ಮೇಲೆ ನಿಷ್ಠೆ ಇಲ್ಲದಿದ್ದರೆ ನಿಜವಾದ ಭಕ್ತಿ ವೃದ್ಧಿಯಾಗುವುದಿಲ್ಲ. ಆದರೆ ಅನೇಕ ವೇಳೆ ಇದೇ ಸ್ವಭಾವವೇ ಅನ್ಯ ವಸ್ತುಗಳನ್ನು ಹಳಿಯುವುದಕ್ಕೆ ಕಾರಣವಾಗುತ್ತದೆ.’’ *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ೧.೧೮೭).* ಶ್ರದ್ಧೆಯ ಕೊರತೆಯುಳ್ಳವರು, ‘ಅನೇಕರು ನಮ್ಮ ಧರ್ಮವನ್ನು ಅನುಸರಿಸುತ್ತಾರೆ. ಅನೇಕರು ನಮ್ಮ ದೇವರನ್ನು ನಂಬುತ್ತಾರೆ’ ಎಂಬ ಭಾವನೆಯಿಂದ ಸಮಾಧಾನಪಟ್ಟುಕೊಳ್ಳುತ್ತಾರೆ. ಅದಕ್ಕಾಗಿಯೇ ಯೇನಕೇನ ಪ್ರಕಾರೇಣ ಮತಾಂತರಗೊಳಿಸುವ ದಂಧೆಯಲ್ಲಿ ತೊಡಗುತ್ತಾರೆ. ಧರ್ಮಕ್ಕಾಗಿ ಹೋರಾಡುತ್ತಾರೆ, ಜೀವ ಕೊಡುತ್ತಾರೆ. ಆದರೆ ಅದರಂತೆ ಜೀವಿಸುವುದಿಲ್ಲ. ಧರ್ಮದ ಹೆಸರಿನಲ್ಲಿ, ದಯಾಮಯನಾದ ಭಗವಂತನ ಹೆಸರಿನಲ್ಲಿ ರಕ್ತದ ಕೋಡಿಯನ್ನೇ ಹರಿಸುತ್ತಾರೆ. ಶ್ರದ್ಧೆಯ ಕೊರತೆಯಿಂದಾಗಿ ತಮ್ಮ ಜೀವನವೇ ನಿಃಸಾರ್ಥಕವಾದಾಗ, ತಮ್ಮನ್ನು ತಾವೇ ದ್ವೇಷಿಸುತ್ತಾರೆ, ಮತ್ತು ಈ ದ್ವೇಷವು ಇತರರ ಕಡೆಗೆ ತಿರುಗುತ್ತದೆ. ಆತ್ಮ ದ್ವೇಷವೇ ಎಲ್ಲ ಕೋಮುಗಲಭೆಗೂ ಮೂಲವೆನ್ನಬಹುದು.



### ಆತ ಶುದ್ಧ ಬುದ್ಧಿಗೆ ಗೋಚರ

**ಶ್ರೀರಾಮಕೃಷ್ಣರು:** ‘‘ನೋಡಿ, ನಾವು ಭಗವಂತನನ್ನು ನೋಡಬಹುದು. ಆತ ಅವಾಙ್ಮಾನಸ ಗೋಚರ ಎಂಬುದಾಗಿ ವೇದ

ದಲ್ಲಿ ಹೇಳಿದೆ: ಇದರ ಅರ್ಥ ವಿಷಯಾಸಕ್ತ ಮನಸ್ಸಿಗೆ ಅಗೋಚರ ಎಂಬುದಾಗಿ. ವೈಷ್ಣವಚರಣ ಹೇಳುತ್ತಿದ್ದ: 'ಆತ ಶುದ್ಧ ಬುದ್ಧಿಗೆ ಗೋಚರ' ಎಂಬುದಾಗಿ. ಆದ್ದರಿಂದಲೇ ಸಾಧುಸಂಗ, ಪ್ರಾರ್ಥನೆ, ಗುರುವಿನಿಂದ ಉಪದೇಶ – ಇವುಗಳೆಲ್ಲದರ ಆವಶ್ಯಕತೆ ಇರುವುದು. ಆಗಮಾತ್ರವೇ ಚಿತ್ತಶುದ್ಧಿ ಉಂಟಾಗುತ್ತದೆ. ಆಗ ಮಾತ್ರವೇ ಆತನ ದರ್ಶನ ದೊರೆಯುತ್ತದೆ. ಬಗ್ಗಡದ ನೀರಿಗೆ ಶುದ್ಧಿಕರಣದ ವಸ್ತುವನ್ನು ಹಾಕಿದರೆ ಆಗ ಅದು ಶುದ್ಧವಾಗುತ್ತದೆ. ಆಗ ಅದರಲ್ಲಿ ಮುಖ ಕಾಣುತ್ತದೆ. ಕೊಳಕಾಗಿರುವ ಕನ್ನಡಿಯಲ್ಲಿ ಮುಖ ನೋಡಿಕೊಳ್ಳಲಾಗುವುದಿಲ್ಲ.'' *(ಶ್ರೀರಾಮಕೃಷ್ಣ ವಚನವೇದ, ಸಂಪುಟ ೧, ಪು. ೧೧೪)*

**ನ ತತ್ರ ಚಕ್ಷುರ್ಗಚ್ಛತಿ ನ ವಾಗ್ಗಚ್ಛತಿ ನೋ ಮನಃ ।**
**ನ ವಿದ್ಮೋ ನ ವಿಜಾನೀಮಃ ಯಥೈತದನುಶಿಷ್ಯಾತ್ ॥**

*(ಕೇನ ೧.೩)*

'ಅಲ್ಲಿಗೆ (ಆತ್ಮನೆಡೆಗೆ) ಕಣ್ಣು ಹೋಗುವುದಿಲ್ಲ, ಮಾತು ಹೋಗುವುದಿಲ್ಲ, ಮನಸ್ಸೂ ಹೋಗುವುದಿಲ್ಲ. ಅದನ್ನು ಹೇಗೆ ತಿಳಿಸಿಕೊಡಬೇಕೆಂಬುದೇ ನಮಗೆ ಅರ್ಥವಾಗುತ್ತಿಲ್ಲ.' ಹೀಗೆ ಅನೇಕ ಹೇಳಿಕೆಗಳು ಭಗವಂತನು ಮಾತು, ಇಂದ್ರಿಯ, ಮನಸ್ಸುಗಳಿಗೆ ಗೋಚರನಲ್ಲ ಎಂದು ಸಾರುತ್ತವೆ. ಒಂದು ವಸ್ತುವಾಗಿ ಅವನ ನಿಜರೂಪವನ್ನು ನೋಡಲಾಗದಿದ್ದರೂ ಮನಸ್ಸು ಶುದ್ಧವಾದರೆ ಅವನನ್ನು ಅನುಭವಿಸಬಹುದು ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದಾರೆ. ಗುಡಿಸುವುದರ ಮೂಲಕ ಸ್ಥೂಲವಾದ ಕೊಳೆಯನ್ನು ತೆಗೆಯುತ್ತೇವೆ. ಸಾರಿಸುವುದರ ಮೂಲಕ ಸೂಕ್ಷ್ಮ ಕೊಳೆಯನ್ನು ತೆಗೆಯುತ್ತೇವೆ. ಹಾಗೆಯೇ ವಿಷಯತ್ಯಾಗದಿಂದ ಸ್ಥೂಲವಾದ ಕೊಳೆ ಹೋಗುತ್ತದೆ, ಸಂಗತ್ಯಾಗದಿಂದ ಸೂಕ್ಷ್ಮ ಸಂಸ್ಕಾರರೂಪದ ಕೊಳೆಯೂ ಹೊರಟುಹೋಗುತ್ತದೆ. ಇನ್ನೊಂದು ರೀತಿಯಲ್ಲಿ ಅರ್ಥೈಸುವುದಾದರೆ: ವಿವೇಕ-ವೈರಾಗ್ಯದ ಮೂಲಕ ಸ್ಥೂಲ ಶುದ್ಧೀಕರಣವಾಗುತ್ತದೆ. ಇದು ಗುಡಿಸುವುದು. ಒದ್ದೆ ಬಟ್ಟೆಯಲ್ಲಿ ಒರಸುವುದೆಂದರೆ – ಜ್ಞಾನದೊಡನೆ ಭಕ್ತಿಯನ್ನು ಸೇರಿಸಿದಾಗ ಸೂಕ್ಷ್ಮ ಶುದ್ಧೀಕರಣವಾಗುತ್ತದೆ.

## ಪಾಪಬುದ್ಧಿ ಒಳ್ಳೆಯದಲ್ಲ

**ಶ್ರೀರಾಮಕೃಷ್ಣರು (ವಿಜಯನಿಗೆ):** ''ನೀವು ಅಷ್ಟೊಂದಾಗಿ 'ಪಾಪ, ಪಾಪ' ಅಂತ ಹೇಳುತ್ತಲೇ ಇರುತ್ತೀರಲ್ಲ, ಏತಕ್ಕೆ? ಒಂದು ನೂರು ಸಲ 'ನಾನು ಪಾಪಿ, ನಾನು ಪಾಪಿ' ಎಂದು ಹೇಳಿದ್ದೇ ಆದರೆ, ವ್ಯಕ್ತಿ ಹಾಗೆಯೇ ಆಗಿ ಬಿಡುತ್ತಾನೆ. ವ್ಯಕ್ತಿ ಅಂಥ ದೃಢವಿಶ್ವಾಸವುಳ್ಳವನಾಗಿರಬೇಕು, ಅವನಿಗೆ ಹೇಳಲು ಸಾಧ್ಯವಾಗಬೇಕು: 'ಏನು? ನಾನು ಭಗವಂತನ ಹೆಸರನ್ನು ಜಪಿಸುತ್ತಿದ್ದೇನೆ. ನನ್ನಲ್ಲಿ ಇನ್ನು ಪಾಪ ಅಂದರೆ?' ಭಗವಂತ ನಮ್ಮ ತಂದೆ ತಾಯಿ. ಆತನಿಗೆ ಹೇಳು: 'ಹೇ ಭಗವಂತ, ನಿಜ ನಾನು ಪಾಪಕಾರ್ಯಗಳನ್ನು ಮಾಡಿದ್ದೇನೆ. ಆದರೆ ಇನ್ನು ಮೇಲೆ ಮಾಡುವುದಿಲ್ಲ.' ಆತನ ನಾಮ ಜಪಿಸಿ ಅದರ ಮಹತ್ತಿನಿಂದ ದೇಹಮನಸ್ಸನ್ನು ಪವಿತ್ರಗೊಳಿಸು – ನಿನ್ನ ನಾಲಿಗೆಯನ್ನು ಪವಿತ್ರಗೊಳಿಸು.'' *(ವಚನವೇದ, ಸಂ.೧, ಪು. ೧೧೪)*

'ನಾನು ಪಾಪಿ' ಎಂದು ಮತ್ತೆ ಮತ್ತೆ ಹೇಳಿಕೊಳ್ಳುವುದೂ ಅಹಂಕಾರವೇ. ಅಹಂಕಾರವು ನಮ್ರತೆಯ ರೂಪದಲ್ಲಿಯೂ ವ್ಯಕ್ತವಾಗುತ್ತದೆ. 'ನಾನು ಪಾಪಿ' ಎಂದು ಹೇಳಿಕೊಳ್ಳುತ್ತಿದ್ದರೆ, ಭಾವಿಸುತ್ತಿದ್ದರೆ, ವ್ಯಕ್ತಿಯಲ್ಲಿ ಕೀಳರಿಮೆ ಉಂಟಾಗುತ್ತದೆ. ಈ ಕೀಳರಿಮೆಯನ್ನು ಮರೆಯಲು ಅವನು ತನ್ನ ಹೆಚ್ಚುಗಾರಿಕೆಯನ್ನು ಮೆರೆಯುತ್ತಾನೆ. ಈ ಮೇಲರಿಮೆಯಿಂದಾಗಿ ಅವನು ಎಲ್ಲ ವಿಷಯದಲ್ಲಿಯೂ ತನ್ನನ್ನು ಮುಂದೆ ಮಾಡಲು ಪ್ರಯತ್ನಿಸುತ್ತಾನೆ. ನಮ್ಮಲ್ಲಿರುವ ಸದ್ಗುಣಗಳನ್ನು ನಾವು ಗುರುತಿಸಬೇಕು. ಇತರರ ದೋಷಗಳನ್ನು ಚಿಂತಿಸುವುದಕ್ಕಿಂತ ನಮ್ಮಲ್ಲಿರುವ ಗುಣಗಳನ್ನು ಚಿಂತಿಸುವುದು ಒಳ್ಳೆಯದು ಎಂದು ಹಿರಿಯರು ಹೇಳುತ್ತಾರೆ. ಸಂಸ್ಕೃತದ ಒಂದು ಸುಭಾಷಿತ:

**ಆತ್ಮನಿಂದಾऽತ್ಮಪೂಜಾ ಚ ಪರನಿಂದಾ ಪರಸ್ತವಃ ।**
**ಅನಾಚಾರಿತಮಾರ್ಯಾಣಾಂ ವೃತ್ತಮೇತಚ್ಚತುರ್ವಿಧಮ್ ॥**

''ತನ್ನನ್ನು ತಾನು ನಿಂದಿಸುವುದು, ಆತ್ಮಪ್ರಶಂಸೆ, ಇತರರನ್ನು ನಿಂದಿಸುವುದು ಮತ್ತು ಇತರರ ಮುಖಸ್ತುತಿ – ಈ ನಾಲ್ಕು ಆರ್ಯಲಕ್ಷಣಗಳಲ್ಲ.''

## ದಯೆ-ಮಾಯೆ

**ಶ್ರೀರಾಮಕೃಷ್ಣರು :** ''ನೋಡಿ, ದಯೆ ಮತ್ತು ಮಾಯೆ ಇವೆರಡೂ ಬೇರೆ ಬೇರೆ. ಮಾಯೆ ಎಂದರೆ, ಆತ್ಮೀಯ ಮಮತೆ. ಉದಾಹರಣೆಗೆ ತಂದೆತಾಯಿ, ಸೋದರಸೋದರಿ, ಹೆಂಡತಿ ಮಕ್ಕಳು ಅವರ ಮೇಲೆ ಇಟ್ಟಿರುವ ಪ್ರೀತಿ. ದಯೆ ಎಂಬುದು ಸರ್ವಭೂತಗಳಲ್ಲಿಯೂ ಇಟ್ಟಿರುವ ಪ್ರೀತಿ, ಸಮದೃಷ್ಟಿ. ಯಾರಲ್ಲಾದರೂ ದಯೆ ಕಂಡುಬರುವುದಾದರೆ, ಉದಾಹರಣೆಗೆ ವಿದ್ಯಾಸಾಗರ, ಆಗ ಅರಿತುಕೊಳ್ಳಬೇಕು ಅದು ಭಗವಂತನ ದಯೆ ಎಂಬುದಾಗಿ. ದಯೆಯಿಂದ ಎಲ್ಲ ಭೂತಗಳ ಸೇವೆ ಸಾಧ್ಯ. ಮಾಯೆಯೂ ಭಗವಂತನಿಗೆ ಸೇರಿದುದು. ಮಾಯೆ ನಮ್ಮನ್ನು ಅಜ್ಞಾನದಿಂದ ಆವೃತರಾಗುವಂತೆ, ಬಂಧನಕ್ಕೆ ಸಿಲುಕುವಂತೆ ಮಾಡಿ ಬಿಡುತ್ತದೆ. ಆದರೆ ದಯೆ ಕ್ರಮೇಣ ನಮಗೆ ಚಿತ್ತಶುದ್ಧಿಯನ್ನು ತಂದು ನಮ್ಮನ್ನು ಮುಕ್ತರನ್ನಾಗಿ ಮಾಡುತ್ತದೆ''. *(ಅಲ್ಲೇ, ಪು. ೧೧೭)*

ದಯೆ ಮತ್ತು ಮಾಯೆ ಇವೆರಡೂ ಪರಸ್ಪರ ವಿರುದ್ಧವಾದ ಭಾವಗಳು. 'ದ' ಅಕ್ಷರವು, ಬೃಹದಾರಣ್ಯಕೋಪನಿಷತ್ತಿನ ಕಥೆಯ ಪ್ರಕಾರ ಮೂರು ಸಕಾರಾತ್ಮಕ ಅರ್ಥಗಳನ್ನು ಸೂಚಿಸುತ್ತದೆ: 'ದತ್ತ' ಎಂದರೆ ದಾನ ಮಾಡು: 'ದಯಧ್ವಂ' ಎಂದರೆ ದಯೆ ತೋರು; ಮತ್ತು 'ದಾಮ್ಯತ' ಎಂದರೆ ಇಂದ್ರಿಯ ನಿಗ್ರಹ ಮಾಡು. ಹಾಗೆಯೇ 'ಮಾ' ಅಕ್ಷರವು ನಿಷೇಧಾತ್ಮಕ ಅರ್ಥವುಳ್ಳದ್ದು, ಅದು ಸೀಮಿತ ದೃಷ್ಟಿಯನ್ನು ಸೂಚಿಸುತ್ತದೆ. ಮಾಯೆ